ಅಲ್ಲದೆ, ಕೆಳಗಿಳಿದು ಹೋಗಿ ಜಾನ್ಸ್‌ನ ಜೊತೆ ರಾಜಕೀಯ ಕುರಿತು ಮಾತಾಡುವುದನ್ನು ಕೂಡ ನಿಲ್ಲಿಸಿದ. ಕೆಲವೊಂದು ವಾರಗಳು ಹೀಗೇ ಕಳೆದು ಹೋದವು. ಅವನನ್ನು ಯಾರೂ ನೋಡಲಿಲ್ಲ, ಆತ ಕೂಡ ಯಾರನ್ನೂ ನೋಡಲಿಲ್ಲ. ಅಲ್ಲಿ ಇಟ್ಟು ಹೋದ ಸಾಮಾನುಗಳು ಅದೃಶ್ಯವಾದಾಗ ಹಾಗೂ ಪ್ರತಿ ಸಂಜೆ ದೀಪಗೃಹದ ಲಾಟೀನು ನಿರ್ದಿಷ್ಟ ಸಮಯಕ್ಕೆ ಹೊತ್ತಿಕೊಂಡಾಗ ಆ ವೃದ್ಧನ ಇರುವಿಕೆಗೆ ಅವು ಸಾಕ್ಷಿಯಾಗುತ್ತಿದ್ದವು. ಸ್ಪಷ್ಟವಾಗಿ ಹೇಳುವುದಾದರೆ, ಆ ವೃದ್ಧ ಹೊರಜಗತ್ತಿಗೆ ಭಿನ್ನ ವ್ಯಕ್ತಿಯಾಗಿಯೇ ರೂಪುಗೊಂಡಿದ್ದ. ತಾಯ್ನೆಲದ ಹಂಬಲಿಕೆ ಇದಕ್ಕೆ ಕಾರಣವಾಗಿರಲಿಲ್ಲ. ಇದೀಗ ತಾಯ್ನೆಲದ ಆ ಹಂಬಲಿಕೆ ಕೂಡ ವೈರಾಗ್ಯವಾಗಿ ಮಾರ್ಪಟ್ಟಿತ್ತು. ಸ್ಕಾವಿನ್‌ಸ್ಕಿಗೆ ಇಡೀ ಜಗತ್ತು ಆಗಷ್ಟೇ ಆರಂಭವಾಗಿ ಆಗಷ್ಟೇ ಆ ದ್ವೀಪದ ಮೇಲೆ ಕೊನೆಗೊಂಡಂತಿತ್ತು. ತಾನು ಸಾಯುವವರೆಗೂ ಈ ಗೋಪುರ ಬಿಟ್ಟು ಕದಲುವಂತಿಲ್ಲ ಎಂಬ ವಿಚಾರಕ್ಕೆ ಆತ ಹೊಂದಿಕೊಂಡಿದ್ದ. ಇದಕ್ಕೆ ಹೊರತಾಗಿ ಇರುವುದೆಲ್ಲವನ್ನೂ ಆತ ಮರೆತುಬಿಟ್ಟಿದ್ದ. ಎಲ್ಲಕ್ಕೂ ಮಿಗಿಲಾಗಿ ಅವನೀಗ ಓರ್ವ ಸನ್ಯಾಸಿಯಂತಾಗಿದ್ದ. ಆತನ ನಯವಾದ ನೀಲಿ ಕಣ್ಣುಗಳು ಓರ್ವ ಮುಗ್ಧ ಮಗುವಿನ ಕಣ್ಣುಗಳ ಹಾಗೆ ನೋಡಲಾರಂಭಿಸಿದವು. ದೂರದಲ್ಲಿರುವ ಯಾವುದೋ ಒಂದು ವಸ್ತುವಿನ ಮೇಲೆ ಅವು ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿದಂತಿದ್ದವು. ತನ್ನೆದುರಿಗಿದ್ದ ಎಲ್ಲಿಲ್ಲದ ಸರಳ ಹಾಗೂ ಭವ್ಯ ವಾತಾವರಣದಲ್ಲಿ ಆ ವೃದ್ಧ ತನ್ನ ವ್ಯಕ್ತಿತ್ವದ ಸ್ಪರ್ಶವನ್ನೇ ಕಳೆದುಕೊಳ್ಳತೊಡಗಿದ್ದ. ತನ್ನ ವ್ಯಕ್ತಿಗತ ಇರುವಿಕೆಯನ್ನೇ ಇಲ್ಲವಾಗಿಸಿಕೊಂಡು ತನ್ನನ್ನು ಮುಸುಕಿದ ಅನಂತದೊಳಗೆ ಆತ ಹೆಚ್ಚು ಹೆಚ್ಚು ಲೀನವಾಗುತ್ತಿದ್ದ. ತನ್ನ ಪರಿಸರದಾಚೆಗಿನ ಯಾವುದೂ ಅವನಿಗೆ ಅರ್ಥವಾಗುತ್ತಿರಲಿಲ್ಲ. ಕೇವಲ ಅಪ್ರಜ್ಞಾಪೂರ್ವಕವಾಗಿ ಎಲ್ಲವನ್ನು ಅನುಭವಿಸುತ್ತಿದ್ದ. ಕೊನೆಗೆ ಆ ಆಕಾಶಕಾಯಗಳು, ಆ ನೀರು, ಆ ಬಂಡೆಗಲ್ಲು, ಆ ಗೋಪುರ, ಆ ಬಂಗಾರವರ್ಣದ ಮರಳುದಿಬ್ಬಗಳು, ಆ ಉಬ್ಬಿದ ಹಾಯಿಪಟಗಳು, ಆ ಕಡಲು ಕೋಳಿಗಳು, ಆ ಅಲೆಗಳ ಅಬ್ಬರವಿಳಿತಗಳು ಎಲ್ಲವೂ ಒಂದು ಅಖಂಡ ಆಕೃತಿಯಾಗಿ, ಒಂದು ಭವ್ಯ ನಿಗೂಢ ಆತ್ಮವಾಗಿ, ಅಂಥ ನಿಗೂಢದಲ್ಲಿ ತಾನು ಮುಳುಗುತ್ತಿರುವಂತೆ ಆತನಿಗೆ ಭಾಸವಾಗುತ್ತಿತ್ತು. ಆ ಆತ್ಮ ತನ್ನಷ್ಟಕ್ಕೆ ತಾನಿದ್ದು ತನ್ನನ್ನು ತಾನೆ ಸಂತೈಸಿಕೊಳ್ಳುತ್ತಿರುವಂತೆ ಆತನಿಗೆನಿಸಿತು. ಆಗಾಗ ಆತ ಮುಗುಳ್ನಗುತ್ತಾನೆ ಹಾಗೂ ಕಲ್ಲಿನಂತಾಗುತ್ತಾನೆ. ಅದರೊಳಗೆ ತನ್ನ ವ್ಯಕ್ತಿಗತ ಇರುವಿಕೆಯನ್ನು ಇಲ್ಲವಾಗಿಸುತ್ತ, ಅದರೊಳಗೆ ಅರ್ಧ ಎಚ್ಚರವಾಗುತ್ತ, ಅರ್ಧ ನಿದ್ರೆಗೈಯುತ್ತ, ಅರ್ಧ ಸಾವಿನಂತಿರುವ ಒಂದು ಭವ್ಯ ವಿಶ್ರಾಂತಿಯನ್ನು ಆತ ಕಂಡುಕೊಂಡಿದ್ದಾನೆ.

## ಅಧ್ಯಾಯ–3

ಕೊನೆಗೊಮ್ಮೆ ಪೂರ್ಣ ಎಚ್ಚರದ ಆ ಗಳಿಗೆ ಬಂದೇ ಬಿಟ್ಟಿತು. ಒಂದು ನಿಗದಿತ ದಿನದಂದು ನೀರು ಹಾಗೂ ಇನ್ನಿತರ ಅಗತ್ಯವಿರುವ ಸಾಮಾನು ಸರಂಜಾಮಗಳನ್ನು, ಹೊತ್ತುಕೊಂಡು ದೋಣಿ ಎಂದಿನಂತೆ ದಡ ತಲುಪಿತು. ಆ ದಿನ ಸ್ಕಾವಿನ್‌ಸ್ಕಿ ಒಂದು ತಾಸು ತಡವಾಗಿ ಕೆಳಗಿಳಿದು ಬಂದು ನೋಡಿದ. ನಿತ್ಯವೂ ಬರುತ್ತಿದ್ದ ಸರಕುಗಳ ಮೂಟೆಯ ಜೊತೆ ಇನ್ನೊಂದು ಮೂಟೆಯ ಪ್ಯಾಕೇಜ ಅಲ್ಲಿತ್ತು, ಆ ಪ್ಯಾಕೇಜ್ ಮೇಲೆ ಅಮೆರಿಕ ದೇಶದ ತಿಕೀಟುಗಳಿದ್ದವು. "ಸ್ಕಾವಿನ್‌ಸ್ಕಿ ಎಸ್‌ಕ್ವಾಯರ್" ಎಂದು ಒರಟಾದ ಕ್ಯಾನ್ವಾಸ್ ಮೇಲೆ ವಿಳಾಸ ಬರೆಯಲಾಗಿತ್ತು.

ಆ ವೃದ್ಧ ಕುತೂಹಲ ತುಂಬಿಕೊಂಡು, ಕ್ಯಾನ್ವಾಸನ್ನು ಕತ್ತರಿಸಿದ ಹಾಗೂ ಒಳಗಿದ್ದ ಪುಸ್ತಕಗಳನ್ನು ನೋಡಿದ. ಒಂದನ್ನು ಎತ್ತಿಕೊಂಡು ನೋಡಿ ನಂತರ ಕೆಳಗಿಟ್ಟ. ಹಾಗೆ ಮಾಡುವಾಗ ಆತನ ಕೈಗಳು ತುಂಬಾ ನಡುಗಿದವು. ಆತ ಕಣ್ಣು ಮುಚ್ಚಿಕೊಂಡು ಕುಳಿತ. ಹಾಗೂ ಏನನ್ನೂ